2. ಈ ಮನೆಗಳನ್ನು ಸಕ್ರಮಗೊಳಿಸುವ ಬಗ್ಗೆ ಹಾಗೂ ಅರ್ಜಿ ನೀಡಲು ಕೊನೆಯ ದಿನಾಂಕವನ್ನು ನಿಗದಿಪಡಿಸಲಾಗಿತ್ತೆ?

3. ಅನೇಕ ಮನೆ ಮಾಲೀಕರು ಅರಿವು ಇಲ್ಲದೆ ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಿರುವುದಿಲ್ಲ, ಹಾಗಿದ್ದಲ್ಲಿ ಮನೆ ಮಾಲೀಕರು ಅರ್ಜಿ ಸಲ್ಲಿಸಲು ಸಮಯವನ್ನು ವಿಸ್ತರಿಸುವ ಬಗ್ಗೆ ಸರ್ಕಾರ ಆಲೋಚಿಸಿದೆಯೇ?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

1) ಬಂದಿದೆ.

2) ಹೌದು. ದಿನಾಂಕ 31-12-95ನ್ನು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವೆಂದು ನಿಗದಿಪಡಿಸಲಾಗಿತ್ತು.

3) ಅರ್ಜಿ ಸಲ್ಲಿಸಲು ಸಮಯವನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ವಿಶ್ವ ಯೋಜನೆಗೆ ಹಣ

710 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವ ಯೋಜನೆಯಡಿ 1995 -96, 1996-97, 1997-98 ಮತ್ತು 1998-99ರ ಆಯವ್ಯಯದಲ್ಲಿ ಒದಗಿಸಿದ ಹಣವೆಷ್ಟು? ಖರ್ಚಾದ ಹಣವೆಷ್ಟು?

ಆ) ವಿಶ್ವ ಯೋಜನೆಯಿಂದ ಗುಡಿ ಕೈಗಾರಿಕೆ ಗ್ರಾಮಾಂತರ ಪ್ರದೇಶದಲ್ಲಿ ಪ್ರಗತಿಯನ್ನು ಸಾಧಿಸಿದೆಯೇ? ಗುರಿ ಮತ್ತು ಸಾಧನೆ ಎಷ್ಟು?

ಇ) ವಿಶ್ವ ಯೋಜನೆಯಡಿಯಲ್ಲಿ ತರಬೇತಿ ಹೊಂದುವವರಿಗೆ ಕೊಡುವ ಸ್ಟೈಫಂಡ್ ಮಿತಿ ಎಷ್ಟು? ಇದನ್ನು ಹೆಚ್ಚು ಮಾಡುವ ಆಲೋಚನೆ ಸರ್ಕಾರಕ್ಕೆ ಇದೆಯೇ?

ಶ್ರೀ ಬಿ.ಎ. ಮೊಹಿದ್ದೀನ್ (ಸಣ್ಣ ಕೈಗಾರಿಕೆ ಸಚಿವರು) :

ಅ)

ಕ್ರ. ಸಂ.	ವರ್ಷ	ಒದಗಿಸಿದ ಹಣ		ಖರ್ಚಾದ ಹಣ
		ಮೂಲ ಅಂದಾಜು	ಪರಿಷ್ಕೃತ ಅಂದಾಜು	
1.	1995-96	1535.00	630.00	606.78
2.	1996-97	1112.00	-	715.075
3.	1997-98	655.00	499.00	488.89

1998-99ನೇ ಸಾಲಿಗೆ ವಿಶ್ವ ಯೋಜನೆಯಡಿ ರೂ. 500 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

ಆ) ಈ ಯೋಜನೆಯಡಿ ಗ್ರಾಮಾಂತರ ಪ್ರದೇಶಗಳಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಗಿದೆ. ಪ್ರಗತಿಯ ವಿವರಗಳು ಈ ಕೆಳಕಂಡಂತಿದೆ.

ವಿವರ	1995-96	1996-97	1997-98
ಸೇವಾ ವಲಯ			
ಗುರಿ	3027	2520	-
ಸಾಧನೆ	2831	2493	-
ತರಬೇತಿ			
ಗುರಿ	22077	21563	13150
ಸಾಧನೆ	22271	17296	11584
ಉತ್ಪಾದನೆ			
ಗುರಿ	46354	41694	29887
ಸಾಧನೆ	42885	34824	26073
ಒಟ್ಟು			
ಗುರಿ	71458	65777	43037
ಸಾಧನೆ	68087	54613	37657

ಇ) ವಿಶ್ವ ಯೋಜನೆಯಡಿ ಪ್ರತಿ ತರಬೇತಿ ಹೊಂದುವ ಅಭ್ಯರ್ಥಿಗೆ ಮಾಸಿಕ ರೂ. 300-00 ಶಿಷ್ಯವೇತನ ನೀಡಲಾಗುತ್ತಿದೆ. ಸ್ಟೈಫೆಂಡ್ (ಶಿಷ್ಯವೇತನ) ಹೆಚ್ಚು ಮಾಡುವ ಯಾವುದೇ ಪ್ರಸ್ತಾವನೆ ಇಲ್ಲ.

ಪಟ್ಟಣ ಪಂಚಾಯಿತಿಯನ್ನು ನಗರಾಭಿವೃದ್ಧಿ ಇಲಾಖೆಗೆ ಒಳಪಡಿಸುವುದು

713 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಟ್ಟಣ ವ್ಯಾಪ್ತಿಗೆ ಬರುವ ಪಂಚಾಯಿತಿಗಳಿಗೆ ಒಳಚರಂಡಿ ಮತ್ತು ನೀರು ಸರಬರಾಜು ಮಾಡುವುದನ್ನು ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಗೆ ಒಳಪಡಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?